ತುಮಕೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಜನರಿಗೆ ಸಾರಿಗೆ ಸೌಲಭ್ಯದಿಂದ ಉಂಟಾಗಿರುವ ತೊಂದರೆ

೭೯೪ ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಾರಿಗೆ ಸೌಲಭ್ಯದ ಕೊರತೆಯಿಂದಾಗಿ ಪ್ರಯಾಣಿಕರಿಗೆ ಉಂಟಾಗಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಪ್ರಯಾಣಿಕರ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಹೌದು

ಆ) ತುಮಕೂರು ಜಿಲ್ಲೆಯನ್ನು ರಾಷ್ಟ್ರೀಕರಣ ಮಾಡದೇ ಇರುವುದರಿಂದ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲು, ಪ್ರಯಾಣಿಕರ ಅವಶ್ಯಕತೆಗಳಿಗನುಗುಣವಾಗಿ ಸ್ಟೇಜ್ ಕ್ಯಾರೇಜ್‌ಗಳಿಗೆ ಮೋಟಾರು ವಾಹನ ಕಾಯಿದೆ ೬೮ಎಲ್‌ರ ಪ್ರಕರಣ ೬೮ ಹಾಗೂ ಮೋಟಾರು ವಾಹನ ಕಾಯಿದೆ ಪ್ರಕರಣ ೭೨(೨) (xxii) ರಲ್ಲಿ ನಿರ್ದೇಶಿಸಿರುವಂತೆ ಸಾರ್ವಜನಿಕರಿಂದ ಬೇಡಿಕೆ ಮನವಿಗಳು ಬಂದಾಗಲೆಲ್ಲಾ ತಾತ್ಕಾಲಿಕ ಪರವಾನಿಗೆಗಳನ್ನು ಪ್ರಾ.ಸಾ.ಅ.ಗಳು ನೀಡುವರು ಜೊತೆಗೆ ಹೆಚ್ಚಿನ ಬಸ್ ಸೌಕರ್ಯ ಒದಗಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೂಚನೆ ನೀಡಲಾಗಿದೆ.

ಶ್ರೀ ಆರ್. ನಾರಾಯಣ.—ಗ್ರಾಮಾಂತರ ಪ್ರದೇಶದ ಆದರಲ್ಲೂ ತುಮಕೂರು ಜಿಲ್ಲೆಯ ಸಾರಿಗೆ ವ್ಯವಸ್ಥೆಯಲ್ಲಿ ಆಗಿರುವ ತೊಂದರೆಯನ್ನು ಗಮನಿಸಿ ಮಾನ್ಯಸಚಿವರು ಕೆಲವೊಂದು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಆದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಖಾಸಗೀ ಬಸ್ಸುಗಳವರು ರೆಗ್ಯುಲರಾಗಿ ಆಪರೇಟ್ ಮಾಡುತ್ತಿಲ್ಲ. ಅವರು ಬೇರೆ ರೀತಿಯಲ್ಲಿ ಮದುವೆ ಕಾಂಟ್ರಾಕ್ಟ್ ಬೇರೆ ಬೇರೆ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುತ್ತೀರುವುದರಿಂದ ಅವರು ರೆಗ್ಯುಲರಾಗಿ ಆಪರೇಟ್ ಮಾಡುತ್ತಿಲ್ಲ. ನಮ್ಮ ಬೆಳ್ಳಾವಿ ಪ್ರಮುಖವಾದ ಹೋಬಳಿ ಕೇಂದ್ರವಾಗಿದ್ದು ಪ್ರತಿನಿತ್ಯ ೩೦-೪೦ ಬಸ್ಸುಗಳು ಸಂಚಾರ ಮಾಡುತ್ತಿವೆ. ಆದರೆ ಈಗ ಅದರ ಅರ್ಧದಷ್ಟು ಬಸ್ಸುಗಳು ಆಪರೇಟ್ ಮಾಡುತ್ತಿಲ್ಲ. ಮತ್ತೆ ಇನ್ನೇನಾಗಿದೆ ಎಂದರೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಸಹ ಇಂಟೀರಿಯರ್ ವಿಲೇಜ್‌ಗಳಿಗೆ ಪರ್ಮಿಟ್ ಕೊಟ್ಟರೂ ಬಸ್ಸುಗಳನ್ನು ಓಡಿಸುತ್ತಿಲ್ಲ ಆ ಊರುಗಳಿಗೆ ಸರ್ಕಾರದ ಬಸ್ಸುಗಳನ್ನೂ ಓಡಿಸುವುದಕ್ಕೆ ತಯಾರಿಲ್ಲ. ಹೀಗಾಗಿ ಒಳಭಾಗದಲ್ಲಿರುವ ನೂರಾರು ಗ್ರಾಮಗಳ ಜನರು ಸಾರಿಗೆ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅಂತಹ ಕಡೆ ಕೊನೆಯ ಪಕ್ಷ ಸರ್ಕಾರದ ಬಸ್ಸುಗಳನ್ನಾದರೂ ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು. ರಾಷ್ಟ್ರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ? ಇದ್ದರೆ ಯಾವಾಗ ಮಾಡುತ್ತೀರಿ ಹಾಗೂ ಇಂಟೀರಿಯರ್ ವಿಲೇಜ್‌ಗಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ.ಜೆ. ಜಾರ್ಜ್.—ತುಮಕೂರು ಜಿಲ್ಲೆಯಲ್ಲಿ ಪೂರ್ಣವಾಗಿ ರಾಷ್ಟ್ರೀಕರಣವಾಗಿಲ್ಲ. ಕೆಲವೊಂದು ಮೈನ್‌ರೂಟ್ಸ್‌ಗಳಲ್ಲಿ ಕೆ ಎಸ್.ಆರ್.ಟಿ.ಸಿ.ಯ ಮಾನಾಪಲಿ ನಡೆಯುತ್ತಿದೆ ನಮ್ಮ ಸರ್ಕಾರ ಒಂದು ಪಾಲಿಸಿ ತೀರ್ಮಾನವನ್ನು ತೆಗೆದುಕೊಂಡಿದೆ ಏನೆಂದರೆ, ಎಲ್ಲೆಲ್ಲಿ ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿದೆ, ಅಂತಹ ಜಿಲ್ಲೆಗಳಲ್ಲಿ ಮೊದಲು ಸಾಕಷ್ಟು ಬಸ್ಸುಗಳನ್ನು ಹಾಕಿ ಸಾರ್ವಜನಿಕರಿಗೆ ಸೌಲಭ್ಯವನ್ನು ಕೊಟ್ಟು, ನಂತರ ಇನ್ನುಳಿದ ಜಿಲ್ಲೆಗಳಲ್ಲಿ ಹೊಸದಾಗಿ ರಾಷ್ಟ್ರೀಕರಣ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಆದರೆ ಹೊಸ ಸೆಂಟ್ರಲ್ ಆಕ್ಟ್ ಪ್ರಕಾರ ಯಾರು ಖಾಸಗೀಯವರು ಮುಂದೆ ಬರುತ್ತಾರೆ ಅವರಿಗೆಲ್ಲಾ ಪರ್ಮಿಟ್ ಕೊಡತಕ್ಕಂಥ ಅವಕಾಶವಿದೆ. ಆ ಪ್ರಯುಕ್ತ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ಜನ ಮುಂದೆ ಬಂದಿದ್ದಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನ ಮುಂದೆ ಬಂದಿದ್ದಾರೆ ಅವರಿಗೆಲ್ಲಾ ಅನುಮತಿ ಕೊಡುತ್ತೇವೆ ಅದೇ ರೀತಿ ಎಲ್ಲೆಲ್ಲಿ ರಸ್ತೆ ಸಾರಿಗೆ ಬಸ್ಸುಗಳು ಓಡುತ್ತಿವೆಯೋ ಅಲ್ಲಿ ಇನ್ನೂ ಹೆಚ್ಚು ಬಸ್ಸುಗಳನ್ನು ಓಡಿಸುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಖಾಸಗೀಯವರು ಯಾರು ಪರ್ಮಿಟ್ ತೆಗೆದುಕೊಂಡು ಅವರಿಗೆ ಕೊಟ್ಟಿರತಕ್ಕ ರೂಟ್‌ನಲ್ಲಿ ಬಸ್ಸುಗಳನ್ನು ಆಪರೇಟ್ ಮಾಡದಿದ್ದಲ್ಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಟ್ರಾನ್ಸ್‌ಪೋರ್ಟ್ ಕಮಿಷನರ್‌ಗೆ ಆದೇಶ ಕೊಡುತ್ತೇನೆ.